ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಸಚಿವರು).—

ಅ) ಮಂಡ್ಯದಿಂದ (೧) ಮೇಲುಕೋಟೆ (೨) ಶ್ರವಣಬೆಳಗೊಳ (೩) ಹಾಸನ, (೪) ಬೇಲೂರು, ಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿದೆ ಮತ್ತು ಬೇಲೂರಿಗೆ ಸಂಪರ್ಕ (ಕನೆಕ್ಟಿಂಗ್) ಸೇವೆಗಳನ್ನು ಒದಗಿಸಲಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

## ಅಲೆಂಬಿಕ್ ಗ್ಲಾಸ್ ಕಾರ್ಖಾನೆಯನ್ನು ಮುಚ್ಚಿರುವುದು.

೧೨೪೨. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ವೈಟ್‌ಫೀಲ್ಡ್‌ನಲ್ಲಿರುವ ಅಲೆಂಬಿಕ್ ಗ್ಲಾಸ್ ಕಾರ್ಖಾನೆ ಮುಚ್ಚಿ ಎಷ್ಟು ದಿನ ಗಳಾದವು ಮತ್ತು ಕಾರಣಗಳೇನು ?

ಆ) ಕಾರ್ಖಾನೆಯನ್ನು ಮುಚ್ಚಲು ಸರ್ಕಾರವು ಅನುಮತಿ ನೀಡಿತೇ ?

ಇ) ಅನುಮತಿ ನೀಡದಿದ್ದರೂ ಕಾರ್ಖಾನೆ ಮುಚ್ಚಿರುವ ಕಾರಣವೇನು ?

ಈ) ಸರ್ಕಾರದ ನಿರ್ದೇಶನಗಳನ್ನು ಹಾಗೂ ಕಾನೂನುಗಳನ್ನು ಉಲ್ಲಂಘಿಸಿರುವುದರಿಂದ ಈ ಮಾಲೀಕರ ವಿರುದ್ಧ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಉ) ಕಾರ್ಖಾನೆ ತೆಗೆದು ಎಲ್ಲ ಕಾರ್ಮಿಕರಿಗೂ ಕೆಲಸ ಸಿಗುವಂತಾಗಲು ಸರ್ಕಾರದವರು ಕ್ರಮ ಕೈಗೊಂಡಿದ್ದಾರೆಯೇ ?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು).—

ಅ) ತೀವ್ರ ವಿದ್ಯುಚ್ಛಕ್ತಿ ಅಭಾವದ ಪ್ರಯುಕ್ತ ೧೫–೧೧–೮೪ ರಿಂದ ಬೆಂಗಳೂರಿನ ಅಲೆಂಬಿಕ್ ಗ್ಲಾಸ್ ಕಾರ್ಖಾನೆಯು ತಮ್ಮ ಒಟ್ಟು ಕಾರ್ಮಿಕರನ್ನು ಲೇ–ಆಫ್ ಮಾಡಿರುತ್ತಾರೆ.

ಆ) ಇಲ್ಲ.

ಇ) ವಿದ್ಯುಚ್ಛಕ್ತಿಯ ಅಭಾವದ ಕಾರಣದಿಂದ ಕಾರ್ಖಾನೆಯನ್ನು ನಡೆಸಲಾಗುವುದಿಲ್ಲವೆಂದು ಆಡಳಿತ ವರ್ಗದವರು ತಿಳಿಸಿದ್ದಾರೆ.

ಈ) ಅಲೆಂಬಿಕ್ ಗ್ಲಾಸ್ ಕಾರ್ಖಾನೆಯ ಮಾಲೀಕರು ತಮ್ಮ ಕಾರ್ಖಾನೆಯನ್ನು ಮುಚ್ಚಲು ಸರ್ಕಾರದ ಅನುಮತಿ ಪಡೆಯಲು ಸಲ್ಲಿಸಿದ ಅರ್ಜಿಯನ್ನು ಸರ್ಕಾರ ೨೨–೪–೮೫ ರಲ್ಲಿ ಅನುಮತಿಯನ್ನು ನಿರಾಕರಿಸಿದೆ. ೨೩–೪–೧೯೮೫ ರಂದು ಅಲೆಂಬಿಕ್ ಗ್ಲಾಸ್ ಕಾರ್ಖಾನೆಯ ಆಡಳಿತ ವರ್ಗವು ಕೈಗಾರಿಕಾ ವಿವಾದಗಳ ಅಧಿನಿಯಮ ೨೫ರ ಉಪನಿಯಮ ೨೫–೦ ರಲ್ಲಿ ಒಂದು ಅರ್ಜಿಯನ್ನು ಒಪ್ಪಿಸಿ ಸರ್ಕಾರ ಹೊರಡಿಸಿದ ಆದೇಶವನ್ನು ಪುನಃ ಪರಿಶೀಲಿಸಿ ಅಥವಾ ವಿವಾದವನ್ನು ಕಾರ್ಮಿಕ ನ್ಯಾಯಾಲಯಕ್ಕೆ ಒಪ್ಪಿಸುವಂತೆ ಕೇಳಲಾಯಿತು. ಸರ್ಕಾರದ ಆಡಳಿತ ವರ್ಗ ಮತ್ತು ಕಾರ್ಮಿಕರ ನಡುವೆ ಮಾತುಕತೆ ನಡೆಸಿದ ನಂತರ ಆಡಳಿತ ವರ್ಗದ ಪುನರ್ ಪರಿಶೀಲನಾ ಅರ್ಜಿಯನ್ನು ಪರಿಶೀಲಿಸಿ ತಳ್ಳಿಹಾಕಿತು. ಆಡಳಿತ ವರ್ಗದವರು ಸರ್ಕಾರದ ಈ ಆದೇಶ ಹಾಗೂ ಕೈಗಾರಿಕೆ ವಿವಾದಗಳ ಅಧಿನಿಯಮ ೨೫–೦ ಅನ್ನು ಪ್ರಶ್ನಿಸಿ ರಾಜ್ಯ ಉಚ್ಚ ನ್ಯಾಯಾಲಯದ ಮುಂದೆ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ. ಸದರಿ ಉಚ್ಚ ನ್ಯಾಯಾಲಯದವರು ಒಂದು ತಾತ್ಕಾಲಿಕ ತೀರ್ಪನ್ನು ನೀಡಿ ಆಡಳಿತ ವರ್ಗದವರು ೧೯೮೬ ನೇ ಜನವರಿ ಅಂತ್ಯದವರೆಗೂ ಕಾರ್ಮಿಕರಿಗೆ ಲೇ–ಆಫ್ ಪರಿಹಾರ ಧನವನ್ನು ಕೊಡಬೇಕೆಂದು ಆಜ್ಞೆ ಮಾಡಿದ್ದಾರೆ.

ಉ) ಅಲೆಂಬಿಕ್ ಗ್ಲಾಸ್ ಕಾರ್ಖಾನೆಯ ಮಾಲೀಕರು ಕಾರ್ಖಾನೆಯನ್ನು ಬೆಂಗಳೂರಿನ ದರ್ಶಕ್ ಲಿಮಿಟೆಡ್ ಇವರಿಗೆ ವರ್ಗಾಯಿಸಿದ್ದಾರೆಂದು ತಿಳಿದು ಬಂದಿದೆ. ಈ ಆಡಳಿತ ವರ್ಗಾವಣೆಯನ್ನು

ದಂಡೋದ್ದೇಶ ಪೂರ್ವಕವಾಗಿ ಮಾಡಲ್ಪಟ್ಟಿದೆ ಎಂದು ಹೇಳಿ ಬೆಂಗಳೂರಿನ ಉಪ ಕಾರ್ಮಿಕ ಆಯುಕ್ತರ ಮುಂದೆ ಒಂದು ವಿವಾದವನ್ನು ಎತ್ತಿರುವರೆಂದು ತಿಳಿದು ಬಂದಿದೆ. ಈ ವಿವಾದದ ಬಗ್ಗೆ ಸಂಧಾನ ಪ್ರಯತ್ನಗಳು ಮುಂದುವರೆಯುತ್ತಿವೆ.

ರಾಜ್ಯದಲ್ಲಿ ಕೈಗಾರಿಕಾ ಕಾನೂನಿನನ್ವಯ ಜಾಹೀರ ಪಡಿಸಿರುವ ನೂಲಿನ ಗಿರಣಿಗಳ ಬಗ್ಗೆ,

೨೦೦೪. ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕೈಗಾರಿಕಾ ಕಾನೂನಿನನ್ವಯ ಜಾಹೀರ ಪಡಿಸಿರುವ ನೂಲಿನ ಗಿರಣಿಗಳು ಯಾವುವು ?

ಆ) ಅವುಗಳಲ್ಲಿ ನಡೆದ ಹಣ ದಂರುಪಯೋಗದ ಪ್ರಕರಣಗಳೆಷ್ಟು ?

ಇ) ಅವುಗಳಲ್ಲಿ ಸರ್ಕಾರದ ಹಣವನ್ನೇನಾದರೂ ತೊಡಗಿಸಲಾಗಿದೆಯೇ ?

ಶ್ರೀ ಜೆ. ಹೆಚ್. ಪಟೀಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).—

ಅ) ಪಟ್ಟಿಯಲ್ಲಿ ನಮೂದಿಸಲಾಗಿದೆ.

ಆ) ಖಾಸಗಿ ವಲಯದಲ್ಲಿರುವುದರಿಂದ ವಿವರಗಳು ಗೊತ್ತಿರುವುದಿಲ್ಲ.

ಇ) ಪಟ್ಟಿಯಲ್ಲಿ ವಿವರಗಳನ್ನು ನಮೂದಿಸಲಾಗಿದೆ.

ANNEXURE — CLAUSE — A

Enclosure to — Replies for L.A. Question No. 2004

List of Textile Mills in the State

| Sl. No. | Name of the unit | locations |
|---|---|---|
| 1 | 2 | 3 |
| Private Textile Mills | | |
| 1. | M/s. Binny Limited | Bangalore |
| 2. | M/s Subhadra Textile Ltd., | Bangalore |
| 3. | M/s. Sri Krishnarajendra Mills Ltd. | Mysore |
| 4. | M/s. Davanagere Cotton Mills Ltd. | Davanagere |
| 5. | M/s. Chandrodaya Mills Ltd. | Davanagere |
| 6. | M/s. Davanagere Cotton Mills Ltd., (Gadag unit) | Davanagere |